**ಪ್ರಧಾನ ಜಿಲ್ಲಾ ಮತ್ತು ಸತ್ರ/ವಿಶೇಷ ನ್ಯಾಯಾಧೀಶರ ನ್ಯಾಯಾಲಯ , ಉಡುಪಿ ಜಿಲ್ಲೆ , ಉಡುಪಿ**

ಸೆಷನ್ಸ್ ಕೇಸ್ ನಂಃ 34/2025 ಪಿಡಬ್ಲ್ಯುಃ 11

ಸಿ.ಡಬ್ಲ್ಯುಃ14

| | |
|---|---|
| ಸಾಕ್ಷಿದಾರರ ಹೆಸರು | ಭರತೇಶ್ |
| ತಂದೆಯ ಹೆಸರು | ಸಿದ್ದಪ್ಪ |
| ವಯಸ್ಸು | 43 ವರ್ಷ |
| ಉದ್ಯೋಗ | ಪೊಲೀಸ್ ಉಪನಿರೀಕ್ಷಕರು, ಉಡುಪಿ ನಗರ ಪೊಲೀಸ್ ಠಾಣೆ |
| ವಿಳಾಸ | ಉಡುಪಿ |

ದಿನಾಂಕಃ 03-03-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದ**

1) ನಾನು ದಿನಾಂಕ 21-08-2023 ರಿಂದ ಇಲ್ಲಿಯವರೆಗೆ ಉಡುಪಿ ನಗರ ಪೊಲೀಸ್ ಠಾಣೆಯಲ್ಲಿ ಪೊಲೀಸ್ ಉಪನಿರೀಕ್ಷಕನಾಗಿ ಸೇವೆ ಸಲ್ಲಿಸುತ್ತಿದ್ದೇನೆ.

2) ಸದರಿ ಠಾಣೆಯ ಗುನ್ನೆ ನಂಬ್ರ 53/2025 ರ ಕಡತವನ್ನು ಮುಂದಿನ ತನಿಖೆಯನ್ನು ತಾರೀಕು 22-03-2025 ರಂದು ಚಾಸಾ- 13 ಇವರಿಂದ ಪಡೆದು ಪರಿಶೀಲಿಸಿದ್ದೆ.

3) ದಿನಾಂಕ 23-03-2025 ರಂದು ಚಾಸಾ-2 ತೋರಿಸಿದಂತೆ, ನಿಶಾನೆ ಪಿ-8 ರ ಪಂಚನಾಮೆ ಬರೆದಿದ್ದೆ. ಆಗ ಚಾಸಾ-5 ಮತ್ತು 6 ಇದ್ದರು. ಅದರಲ್ಲಿರುವ ನನ್ನ ಸಹಿಯನ್ನು ಈಗ ನೋಡಿ ಅದು ನಿಶಾನೆ ಪಿ-8(ಡಿ) ಆಗಿದೆ. ಆಗ ತೆಗೆದ ಪೋಟೋ ನಿಶಾನೆ ಪಿ-9 ಆಗಿದೆ. ಅದೇ ದಿನ ಚಾಸಾ-1 ಇವರ ಮರು ಹೇಳಿಕೆ ಮತ್ತು ಚಾಸಾ-2, 3, 4, ಇವರ ಹೇಳಿಕೆಯನ್ನು ಪಡೆದಿದ್ದೆ.

4) ದಿನಾಂಕ 24-03-2025 ರಂದು ಉಪಚಾರ ಪಡೆಯುತ್ತಿದ್ದ ಆರೋಪಿತನನ್ನು ಉಪಚಾರದ ನಂತರ ನನ್ನ ಮುಂದೆ ಹಾಜರುಪಡಿಸಿದ್ದು, ಆತನ ಮೇಲೆ ದಸ್ತಗಿರಿ ಕ್ರಮ

ಜರುಗಿಸಿದ್ದೆ. ಆಗ ಬರೆದ ಪಂಚನಾಮೆ ನಿಶಾನೆ ಪಿ-2 ಆಗಿದೆ. ಆ ಸಮಯದಲ್ಲಿ ಆರೋಪಿ ನೀಡಿದ್ದ ಹೇಳಿಕೆಯನ್ನು ಸಹ ಪಡೆದಿದ್ದೆ. ಈದಿನ ವಿಸಿ ಮೂಲಕ ನೋಡಿದ ಆರೋಪಿತನನ್ನು ಆದಿನ ದಸ್ತಗಿರಿ ಕ್ರಮ ಜರುಗಿಸಿದ್ದೆ. ಆರೋಪಿಯ ಹೇಳಿಕೆಯಂತೆ ತನಿಖೆಗಾಗಿ ಚಾಸಾ-7 ಮತ್ತು 8 ಇವರನ್ನು ಕರೆಯಿಸಿಕೊಂಡು, ವಿಷಯ ತಿಳಿಸಿದ್ದೆ. ಆರೋಪಿಯನ್ನು ಚಾಸಾ-7 ಮತ್ತು 8 ಇವರೊಂದಿಗೆ ಕರೆದುಕೊಂಡು ಹೋದಾಗ, ಆರೋಪಿ ನಿಶಾನೆ ಪಿ-8 ರ ಜಾಗೆಯನ್ನು ತೋರಿಸಿ, ಹಲ್ಲೆಯ ಬಗ್ಗೆ ಮಾಹಿತಿ ಕೊಟ್ಟಿದ್ದ. ಅದಕ್ಕಾಗಿ ಅಲ್ಲಿ ನಿಶಾನೆ ಪಿ-3 ರ ಪಂಚನಾಮೆ ಬರೆದಿದ್ದೆ. ಅದರಲ್ಲಿರುವ ನನ್ನ ಸಹಿಯನ್ನು ಈಗ ನೋಡಿ ಅದನ್ನು ನಿಶಾನೆ ಪಿ-3(ಸಿ) ಎಂದು ಗುರುತಿಸಿದ್ದೇನೆ. ಆ ಸಮಯದಲ್ಲಿ ನಿಶಾನೆ ಪಿ-4 ರ ಪೋಟೋ ತೆಗೆದಿದೆ.

5) ನಂತರ ಆರೋಪಿಯೊಂದಿಗೆ ಠಾಣೆಗೆ ಬಂದಿದ್ದೆ. ಆರೋಪಿತನನ್ನು ಉಪಚಾರಕ್ಕಾಗಿ ಸೇರಿಸಿದಾಗ, ಆತನ ಬಳಿಯಲ್ಲಿ ಇದ್ದ ಹತ್ಯೆಯ ಆಯುಧ ಎಂಒ-1 ನ್ನು, ಆತನನ್ನು ಉಪಚರಿಸಿದ್ದ ವೈದ್ಯರು ಪಡೆದಿದ್ದರು ಎಂದು ತಿಳಿದಿತ್ತು. ಅದನ್ನು ಮತ್ತು ಚಾಸಾ-1 ಇವರ ರಕ್ತದ ಕಲೆಯಾದ ಬಟ್ಟೆ ಎಂಒ-2 ಮತ್ತು 3 ಇವುಗಳನ್ನು ಪಿಸಿ 80 ಇವರ ಮೂಲಕ ಕಳುಹಿಸಿದ್ದರು. ಅವುಗಳನ್ನು ಚಾಸಾ-7 ಮತ್ತು 8 ಇವರ ಸಮಕ್ಷಮ ಪಡೆದಿದ್ದೆ. ಅದಕ್ಕಾಗಿ ನಿಪಿ-5 ರ ಪಂಚನಾಮೆ ಬರೆದಿದ್ದೆ. ನಿಪಿ-5 ರಲ್ಲಿರುವ ನನ್ನ ಸಹಿ ನಿಶಾನೆ ಪಿ-5(ಸಿ) ಆಗಿದೆ. ನಂತರ ಆರೋಪಿಯನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿದ್ದೆ.

6) ಆದಿನ ಜಪ್ತಾದ ಎಂಒ-1 ರಿಂದ 3 ಇವುಗಳನ್ನು ತಪಾಸಣೆಗಾಗಿ ಆರ್ ಎಫ್ ಎಸ್ ಎಲ್ ಮಂಗಳೂರಿಗೆ ಕಳುಹಿಸಿದ್ದೆ. ಚಾಸಾ-1, 2, ಮತ್ತು ಆರೋಪಿಯ ಗಾಯದ ಪ್ರಮಾಣ ಪತ್ರಗಳನ್ನು ಪಡೆದಿದ್ದೆ. ಅವುಗಳನ್ನು ಈಗಾಗಲೇ ನಿಪಿ-11 ರಿಂದ 13 ಎಂದು ಗುರುತಿಸಲಾಗಿದೆ. ಎಂಒ-1 ನ್ನು ಎಪ್ ಎಸ್ ಎಲ್ ನಿಂದ ಪಡೆದ ನಂತರ ಚಾಸಾ-1 ಈತನಿಗೆ ಉಪಚರಿಸಿದ ವೈದ್ಯರಿಂದ ಆಯುಧವನ್ನು ತಪಾಸು ಮಾಡಿಸಿ , ನಿಶಾನೆ ಪಿ-14 ಮತ್ತು 15 ರ ವರದಿ ಪಡೆದಿದ್ದೆ. ನಾನು ಪಡೆದ ಆರ್ ಎಪ್ ಎಸ್ ಎಲ್ ವರದಿ ನಿಶಾನೆ ಪಿ-16. ತನಿಖೆಯ ಸಮಯದಲ್ಲಿ ತೆಗೆದಿದ್ದ ಪೋಟೋಗಳಿಗಾಗಿ ಸಲ್ಲಿಸಿದ ಪ್ರಮಾಣ ಪತ್ರವನ್ನು ಚಾಸಾ-11 ಇವರಿಂದ ಪಡೆದಿದ್ದೆ. ಆ ಪ್ರಮಾಣ ಪತ್ರ ಈಗಾಗಲೇ ನಿಶಾನೆ ಪಿ-19 ಆಗಿದೆ. ನಂತರ ಮುಂದಿನ ತನಿಖೆಯನ್ನು ಚಾಸಾ-15 ಇವರಿಗೆ ವಹಿಸಿಕೊಟ್ಟಿದ್ದೆ. ಚಾಸಾ-3 ಮತ್ತು 4 ಇವರು ನನ್ನ ಮುಂದೆ ನಿಪಿ-1 ಮತ್ತು 10 ರಂತೆ ಹೇಳಿಕೆ ನೀಡಿದ್ದರು.

**ಪಾಟೀಸವಾಲುಃ  ಆರೋಪಿ ಪರವಾಗಿ ಶ್ರೀ ಆರ್.ಪಿ (ಎಲ್.ಎ.ಡಿ.ಸಿ)  ವಕೀಲರಿಂದ**

1) ಚಾಸಾ-3 ಇವರು ಯಾವ ಆಸ್ಪತ್ರೆಯಿಂದ ಉಪಚಾರ ಪಡೆದಿದ್ದರು ಎಂದು ಗೊತ್ತಿಲ್ಲ. ಚಾಸಾ-3 ಇವರನ್ನು ಯಾರು ಆಸ್ಪತ್ರೆಗೆ ಸೇರಿಸಿದ್ದರು ಎಂದು ಗೊತ್ತಿಲ್ಲ.  ನಿಶಾನೆ ಪಿ-6 ರ ಜಾಗೆಗೆ ದೂರು ಕೊಡುವ ಮೊದಲೇ ನಮ್ಮ ಸಿಬ್ಬಂದಿ ಹೋಗಿ ಬಂದಿದ್ದರು.  ಚಾಸಾ-1 ಮತ್ತು ಆರೋಪಿ ಗಾಯಾಳುಗಳಾಗಿದ್ದು, ಅವರನ್ನು ಅಲ್ಲಿ ಇದ್ದ ಕಾವಲುಗಾರರು ಆಸ್ಪತ್ರೆಗೆ ಹಾಕಿದ್ದರು ಎಂದು ಗೊತ್ತು.  ನಮ್ಮ ಸಿಬ್ಬಂದಿಯವರೇ ಚಾಸಾ-1 ಮತ್ತು ಆರೋಪಿಯನ್ನು ಆಸ್ಪತ್ರೆಗೆ ಸೇರಿಸಿದ್ದರು ಎಂದರೆ ಸರಿಯಲ್ಲ.

2) ಚಾಸಾ-2 ಈತನನ್ನು ಹನುಮಂತ ಎಂದು ಕರೆಯುತ್ತಿದ್ದ ಬಗ್ಗೆ ನಾನು ದಾಖಲೆಯನ್ನು ಪಡೆದಿಲ್ಲ. ತನಿಖೆಯ ಸಮಯದಲ್ಲಿ ಆಸ್ಪತ್ರೆಯಲ್ಲಿ ಉಪಚಾರ ಪಡೆಯುತ್ತಿದ್ದ ಹನುಮಂತ ಎಂಬ ವ್ಯಕ್ತಿ ಯಾರು ಎಂದು ಗೊತ್ತಿಲ್ಲ. ತನಿಖೆಯ ಸಮಯದಲ್ಲಿ ನಿಶಾನೆ ಪಿ-8 ರಲ್ಲಿ ಹೇಳಿದ ಘಟನೆ ಎರಡು ಜಾಗೆಗಳಲ್ಲಿ ಆಗಿದೆ ಎಂದು ಹೇಳಿದ್ದರು.  ಆ ಎರಡು ಜಾಗೆಗಳನ್ನು ನಿ.ಪಿ-8 ರ ಸಮಯದಲ್ಲಿ ನೋಡಿದ್ದೇನೆ.  ನಿ.ಪಿ-8 ರಲ್ಲಿ ಹೇಳಿದ ಎರಡು ಜಾಗೆಗಳ  ನಡುವೆ ಸುಮಾರು 800 ಮೀಟರ್ ಗಳ ಅಂತರ.  ನಿ.ಪಿ-8 ರಲ್ಲಿ ನಾನು ಎರಡು ಜಾಗೆಗಳನ್ನು ನಾನು ತಪಾಸು ಮಾಡಿಲ್ಲ ಎಂದರೆ ಸರಿಯಲ್ಲ.

3) ನಿ.ಪಿ-8 ರ ಜಾಗೆ ಜನಸಂದಣಿ ಇರುವ ಜಾಗೆ.  ನಿ.ಪಿ-8 ರ ಸಮಯದಲ್ಲಿ ನಾನು ಅಲ್ಲಿದ್ದ ಸ್ಥಳೀಯರನ್ನು ಕರೆದಿದ್ದೆ.  ನಿ.ಪಿ-8 ಕ್ಕೆ ಸಹಿ ಮಾಡಿದ ಚಾಸಾ-5 ಮತ್ತು 6 ಇವರು ಸ್ಥಳೀಕರು ಅಲ್ಲ ಎಂದರೆ, ಅವರು ಅಲ್ಲಿ ಇದ್ದರು.  ನಿ.ಪಿ-8 ರ ಸಮಯದಲ್ಲಿ ನಮಗೆ ನಿಶಾನೆ ಪಿ-6 ರ ಹಲ್ಲೆಗೆ ಸಂಬಂಧಿಸಿದ ಗುರುತುಗಳ ಇರಲಿಲ್ಲ ಎಂದರೆ ಸರಿಯಲ್ಲ.  ನಿ.ಪಿ-4 ಮತ್ತು 9 ರ ಪೋಟೋಗಳನ್ನು ನಮ್ಮ ಸಿಬ್ಬಂದಿ ತೆಗೆದಿದ್ದರು.  ಆ ಪೋಟೋಗಳಲ್ಲಿ ಚಾಸಾ-11 ಇದ್ದಾರೆ.  ನಿಪಿ-4,7 ಮತ್ತು 9 ರ ಪೋಟೋಗಳನ್ನು ಪ್ರಿಂಟ್ ಮಾಡಿಸಿದ ಸ್ಟುಡಿಯೋ ಯಾವುದು ಎಂದು ಗೊತ್ತಿಲ್ಲ.  ಆ ಸ್ಟುಡಿಯೋದಿಂದ ಸಾಕ್ಷ್ಯ ಕಾಯಿದೆಯ ಪ್ರಮಾಣ ಪತ್ರ ಪಡೆದಿಲ್ಲ.

4) ನಾನು ತಾರೀಕು 23-03-2025 ರಂದು ನಿಶಾನೆ ಪಿ-6 ರ ಜಾಗೆಗೆ ಭೇಟಿ ಮಾಡಿಲ್ಲ ಎಂದರೆ ಸರಿಯಲ್ಲ. ಅಲ್ಲಿ ನಿಪಿ-8 ರ ಪಂಚನಾಮೆ ಬರೆದಿಲ್ಲ ಎಂದರೆ ಸರಿಯಲ್ಲ. ಆರೋಪಿಯನ್ನು ದಸ್ತಗಿರಿ ಮಾಡಿದಾಗ ಅಂಗ ತಪಾಸಣೆ ಮಾಡಿದ್ದೆ. ಆಗ ಆತನ ಬಳಿ ಯಾವುದೇ ಸ್ವತ್ತುಗಳು ಇರಲಿಲ್ಲ. ನಾನು ಆರೋಪಿಯನ್ನು ನಿಪಿ-2 ರ ಅಡಿಯಲ್ಲಿ ದಸ್ತಗಿರಿ ಕ್ರಮ ಜರುಗಿಸಿಲ್ಲ ಎಂದರೆ ಸರಿಯಲ್ಲ. ಆರೋಪಿ ನನ್ನ ಮುಂದೆ ಯಾವುದೇ ಹೇಳಿಕೆ ನೀಡಿಲ್ಲ ಎಂದರೆ ಸರಿಯಲ್ಲ. ಆರೋಪಿ ನಮ್ಮನ್ನು ನಿಶಾನೆ ಪಿ-3 ರ ಜಾಗೆಗೆ ಕರೆದುಕೊಂಡು ಹೋಗಿಲ್ಲ ಎಂದರೆ ಸರಿಯಲ್ಲ. ನಿಪಿ-3 ರ ಪಂಚನಾಮೆಯನ್ನು ಆರೋಪಿಗೆ ತೊಂದರೆ ಕೊಡಲು ಸೃಷ್ಟಿಸಿದೆ ಎಂದರೆ ಸರಿಯಲ್ಲ.

5) ನಿ.ಪಿ-2, 3, ಮತ್ತು 5 ರ ಪಂಚನಾಮೆಗಳಿಗೆ ಚಾಸಾ-7 ಮತ್ತು 8 ಅವರೇ ಸಾಕ್ಷಿದಾರರು ಎಂದರೆ ನಿಜ. ಅವರಿಬ್ಬರು ಸ್ಥಳೀಯರು ಅಲ್ಲ ಎಂದರೆ ಸರಿಯಲ್ಲ. ಅವರು ನಮ್ಮ ಠಾಣೆಯ ಖಾಯಂ ಸಾಕ್ಷಿದಾರರು ಎಂದರೆ ಸರಿಯಲ್ಲ. ಎಂಒ-1 ರಿಂದ 3 ಇವುಗಳನ್ನು ಸೀಲ್ ಪ್ಯಾಕ್ ನಲ್ಲಿ ಕಳುಹಿಸಿದ್ದರು. ಎಂಒ-1 ರಿಂದ 3 ಇವುಗಳನ್ನು ದೂರಿಗಾಗಿ ಸೃಷ್ಟಿಸಿದೆ ಎಂದರೆ ಸರಿಯಲ್ಲ. ಎಂಒ-1 ರಿಂದ 3 ರಲ್ಲಿಯ ರಕ್ತದ ಕಲೆಗಳು ಯಾರಿಗೆ ಸೇರಿತ್ತು ಎಂಬುದನ್ನು ನಾನು ತಪಾಸು ಮಾಡಿಲ್ಲ. ಎಂಒ-1 ರಿಂದ 3 ರಲ್ಲಿಯ ರಕ್ತದ ಕಲೆಗಳನ್ನು ತಪಾಸು ಮಾಡಲು ದೂರುದಾರನಿಂದಾಗಲೀ, ಗಾಯಾಳುನಿಂದಾಗಲೀ, ಆರೋಪಿಯಿಂದಾಗಲೀ, ರಕ್ತದ ಮಾದರಿಗಳನ್ನು ಪಡೆದಿಲ್ಲ. ವೈದ್ಯಾಧಿಕಾರಿಗಳು ಮತ್ತು ಆರ್ ಎಫ್ ಎಸ್ ಎಲ್ ಪರಿಣಿತರಿಗೆ ಪ್ರಭಾವ ಬೀರಿ ವರದಿಗಳನ್ನು ಪಡೆದಿದ್ದೇನೆ ಎಂದರೆ ಸರಿಯಲ್ಲ.

6) ನನ್ನ ತನಿಖೆಯ ಸಮಯದಲ್ಲಿ ಗಾಯಾಳು ಮತ್ತು ಆರೋಪಿಯ ನಡುವೆ ಪೂರ್ವ ಪರಿಚಯ ಇಲ್ಲ ಎಂದು ಕಂಡು ಬಂದಿತ್ತು ಎಂದರೆ ಸರಿ. ಆರೋಪಿತನನ್ನು ಗುರುತಿಸಲು ಯಾವುದೇ ಗುರುತಿನ ಕವಾಯತು ಮಾಡಿಲ್ಲ ಎಂದರೆ ನಿಜ. ನಿಶಾನೆ ಪಿ-6 ರ ಜಾಗೆಯಲ್ಲಿ ಘಟನೆ ನಡೆದಾಗ ವಿದ್ಯುತ್ ಬೆಳಕು ಇದ್ದ ಬಗ್ಗೆ ಯಾವುದೇ ಸಾಕ್ಷಿದಾರರು ಹೇಳಿಲ್ಲ. ನಾನು ನಿಶಾನೆ ಪಿ-2,3,5, 8, ರ ಪಂಚನಾಮೆಗಳನ್ನು ನಾನು ಬರೆದಿಲ್ಲ ಎಂದರೆ ಸರಿಯಲ್ಲ. ನಾನು ಸಾಕ್ಷಿದಾರರ ಹೇಳಿಕೆಯಾಗಲೀ, ಪಿರ್ಯಾಧಿಯ ಮರುಹೇಳಿಕೆ

ಪಡೆದಿಲ್ಲ ಎಂದರೆ ಸರಿಯಲ್ಲ. ಆರೋಪಿಗೂ, ಜಪ್ತಾದ ಮುದ್ದೆಮಾಲುಗಳಿಗೆ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಆರೋಪಿಯ ವಿರುದ್ಧ ಸರಿಯಾಗಿ ತನಿಖೆ ಮಾಡದೇ ಒಂದು ತಪ್ಪು ಅಂತಿಮ ವರದಿ ಬರೆದಿದ್ದೇನೆ ಎಂದರೆ ಸರಿಯಲ್ಲ. ಚಾಸಾ-3 ಮತ್ತು 4 ಇವರು ನನ್ನ ಮುಂದೆ ನಿಪಿ-1 ಮತ್ತು 4 ರಂತೆ ಹೇಳಿಕೆ ನೀಡಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ - ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದರು.

(ಕೆ.ಎಸ್. ಗಂಗಣ್ಣವರ್)
ಪ್ರಧಾನ ಜಿಲ್ಲಾ ಮತ್ತು ಸತ್ರ/ವಿಶೇಷ ನ್ಯಾಯಾಧೀಶರು,
ಉಡುಪಿ.